# ಪ್ರೀತಿಯ ಗುರುಗಳಿಗೆ ನಮಸ್ಕಾರ





ಪ್ರಭುಶಂಕರ ಅವರ ನೆನಪುಗಳು ನೂರಾರು. ಕಳೆದ ವಾರ (08–04–2018) ನಮ್ಮನ್ನಗಲಿದ ನನ್ನ ಈ ಗುರುವರ್ಯರು, ತಮ್ಮ ಹಾಸ್ಯಪ್ರಜ್ಞೆಯ ಪ್ರತಿಕ್ರಿಯೆಗಳಿಂದಾಗಿ ನೆನಪಿನಲ್ಲಿ ಸದಾ ಹಸಿರಾಗಿರುತ್ತಾರೆ.

■ **ಪಂಡಿತಾರಾಧ್ಯ**

ನಾನು 1970–72ರಲ್ಲಿ ಮಾನಸಗಂಗೋತ್ರಿಯಲ್ಲಿ ಕನ್ನಡ ಎಂಎ ವಿದ್ಯಾರ್ಥಿಯಾಗಿದ್ದಾಗ ಪ್ರಭುಶಂಕರ ಅವರು ಪ್ರಸಾರಾಂಗದ ನಿರ್ದೇಶಕರಾಗಿದ್ದರು. ಅವರು ನಮಗೆ ಕೆಲವು ತರಗತಿಗಳನ್ನೂ ತೆಗೆದುಕೊಳ್ಳುತ್ತಿದ್ದರು. ನಮಗೆ ತೌಲನಿಕ ಮಹಾಕಾವ್ಯ ಎಂಬ ಪತ್ರಿಕೆ ಇತ್ತು. ಪ್ರಭುಶಂಕರ ಅವರು ವಾಲ್ಮೀಕಿ ರಾಮಾಯಣದ ಆಯ್ದ ಭಾಗಗಳನ್ನು ನಮಗೆ ಪಾಠ ಮಾಡುತ್ತಿದ್ದರು; ಹಾಸ್ಯದೊಂದಿಗೆ ಪರಿಣಾಮಕಾರಿಯಾಗಿ ಪಾಠ ಮಾಡುತ್ತಿದ್ದರು. ರಾಮ ವನವಾಸಕ್ಕೆ ಹೋಗುವುದೆಂದು ನಿರ್ಧರಿಸಿದಾಗ, ಸೀತೆ ನಾನೂ ಬರುತ್ತೇನೆ ಎನ್ನುತ್ತಾಳೆ. ಅದಕ್ಕೆ ಪ್ರಭುಶಂಕರರ ವಿವರಣೆ: ಈ ನಾನೂ ಬರುತ್ತೇನೆ ಎನ್ನುವುದರ ಕಷ್ಟ ನಿಮಗೆ ಈಗ ಗೊತ್ತಾಗುವುದಿಲ್ಲ! ಇದು ಅವರ ಹಾಸ್ಯದ ರೀತಿ!

ಅನಂತರ ನಾನು ಮಂಗಳಗಂಗೋತ್ರಿಯಲ್ಲಿ ಅಧ್ಯಾಪಕನಾದಾಗ ಅವರು ನಮಗೆ ಹೇಳಿದ ಅನೇಕ ಹಾಸ್ಯಪ್ರಸಂಗಗಳನ್ನು ಸಂದರ್ಭಾನುಸಾರ ನನ್ನ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದೆ. ನಾನು ರಾಮಾಯಣವನ್ನು ಪಾಠ ಮಾಡುವಾಗ ರಾಮ ವನವಾಸಕ್ಕೆ ಹೋಗುವ ಸಂದರ್ಭದಲ್ಲಿ, ಪ್ರಭುಶಂಕರ ಅವರು ಸೀತೆಯ ಮಾತಿಗೆ ಹೇಳಿದ್ದ ವಿವರಣೆಯನ್ನು ವಿದ್ಯಾರ್ಥಿಗಳಿಗೆ ಹೇಳಿ ನಗಿಸಿದ್ದೆ. ಮೈಸೂರಿಗೆ ಬಂದಾಗ ಈ ವಿಷಯವನ್ನು ಅವರಿಗೆ ಹೇಳಿದೆ. ಕೂಡಲೇ ಅವರ ಪ್ರತಿಕ್ರಿಯೆ ಬಂತು: ನಿನಗೆ ಈಗಲೂ ಗೊತ್ತಾಗಿಲ್ಲವಲ್ಲಪ್ಪ!

ಪ್ರಭುಶಂಕರ ಅವರನ್ನು ಮಾನಸಗಂಗೋತ್ರಿಯ ಅಧ್ಯಾಪಕರ ನಿವಾಸದಲ್ಲಿದ್ದ ಮತ್ತೊಬ್ಬ ಗುರುಗಳಾದ ಜಿ.ಎಚ್. ನಾಯಕರ ಮನೆಯಲ್ಲಿ ಭೇಟಿಯಾಗುತ್ತಿದ್ದೆ. ಆಗ ನಡೆಯುತ್ತಿದ್ದ ಮಾತುಕತೆಗಳಲ್ಲಿ ಪ್ರಭುಶಂಕರ ಅವರ ಜೀವನದೃಷ್ಟಿಯ ಹಾಸ್ಯದ ಹಲವು ಪ್ರಸಂಗಗಳು ಬರುತ್ತಿದ್ದವು. ಕುವೆಂಪು ಅವರ ನೆಚ್ಚಿನ ವಿದ್ಯಾರ್ಥಿಯಾಗಿದ್ದ ಪ್ರಭುಶಂಕರ ಅವರು ಕುವೆಂಪು ಅವರ ಹಾಗೆ ರಾಮಕೃಷ್ಣಾಶ್ರಮದ ಸಂಪರ್ಕವಿದ್ದವರು. ಮಹಾಕವಿಯ ಶಿಷ್ಯರಾದ್ದರಿಂದ ನಾರದ ಭಕ್ತಿಸೂತ್ರದಂಥ ಅಧ್ಯಾತ್ಮದ ವಿಷಯಗಳನ್ನು ಪಾಠಕ್ಕೆ ಬೇಡದಿದ್ದರೂ ವಿವರಿಸುತ್ತಿದ್ದರು. ಜೊತೆಗೆ ಮಹಾಕವಿಗಳ ಹಾವಭಾವಗಳ ಅನುಕರಣೆಯನ್ನೂ ಮಾಡುತ್ತಿದ್ದರು. 'ಹಕ್ಕಿ' ಎಂದು ಹೇಳಿ ಭಾವುಕರಾಗಿ ಸ್ವಲ್ಪ ಕಾಲ ಮೌನವಾಗಿದ್ದು ಅನಂತರ, 'ಹಾರಿಹೋಯಿತು' ಎನ್ನುತ್ತಿದ್ದರಂತೆ!

ಒಮ್ಮೆ ಜೂನಿಯರ್ ಬಿಎ ಹಾಲಿನಲ್ಲಿ ತರಗತಿಗೆ ಬಂದವರು, 'ನಾನು ಕಳೆದವಾರ ಏನು (ಪಾಠ) ಮಾಡುತ್ತಿದ್ದೆ?' ಎಂದು ತಮ್ಮ ಆತ್ಮೀಯ ವಿದ್ಯಾರ್ಥಿಯನ್ನು ಕೇಳಿದರು. ಮುಂದಿನ ಸಾಲಿನಲ್ಲಿ ಕುಳಿತಿದ್ದ ಕಟ್ಟುಮಸ್ತಾಗಿ ಎತ್ತರವಾಗಿದ್ದ ವಿದ್ಯಾರ್ಥಿಯೊಬ್ಬ ದಿಢೀರನೆ ಎದ್ದು ನಿಂತು, 'ಸಾಕಷ್ಟು ಬೋರು ಮಾಡುತ್ತಿದ್ದಿರಿ' ಎಂದು ನಾಟಕೀಯವಾಗಿ ಹೇಳಿ ಥಟ್ಟನೆ ಕುಳಿತನಂತೆ! ಪ್ರಭುಶಂಕರ ಅವರು ಆ ವಿದ್ಯಾರ್ಥಿಯನ್ನು ಎದ್ದು ನಿಲ್ಲುವಂತೆ ಬೆರಳಿನಲ್ಲಿ ಸೂಚಿಸಿದಾಗ ಅವನು ಮತ್ತೆ ಅಷ್ಟೇ ಚುರುಕಾಗಿ ಎದ್ದು ನಿಂತನಂತೆ. ಅನಂತರ ಅವನಿಗೆ ಕೂರುವಂತೆ ಬೆರಳಿನಲ್ಲಿಯೇ ಸೂಚಿಸಿದರಂತೆ. ನಾಯಕರು ಇದನ್ನು ಅಭಿನಯಪೂರ್ವಕವಾಗಿ ವಿವರಿಸುತ್ತಿರುವಾಗ ಪ್ರಭುಶಂಕರ ಅವರು ಹಾರ್ದಿಕವಾಗಿ ನಗುತ್ತಿದ್ದರು. ತಮ್ಮನ್ನು ತಾವು ಹಾಸ್ಯ ಮಾಡಿಕೊಂಡು ನಗುವುದನ್ನು ಅವರು ನಮಗೆ ಕಲಿಸಿದರು.

ಕುವೆಂಪು ಅವರ ಜೊತೆ ಪ್ರಭುಶಂಕರ ಅವರು ವಾಯುವಿಹಾರಕ್ಕೆ ಹೋಗುತ್ತಿದ್ದಾಗ ಮಹದೇಶ್ವರನ ಬೆಟ್ಟಕ್ಕೆ ಹೊರಟಿದ್ದ ಯಾತ್ರಾರ್ಥಿಗಳು ಎದುರಾದರು. ಕುವೆಂಪು, 'ನೋಡಿ, ಎಂಥ ಮೌಢ್ಯ!' ಎಂದು ಪ್ರತಿಕ್ರಿಯಿಸಿದರು. ಅದಕ್ಕೆ 'ನಾನು ನೀವು ರಾಮಕೃಷ್ಣಾಶ್ರಮಕ್ಕೆ ಹೋಗುವುದೂ ಮೌಢ್ಯವೇ ಅಲ್ಲವೆ? ಅವರದು ಅನಕ್ಷರಸ್ಥ ಮೌಢ್ಯ, ನಮ್ಮದು ಅಕ್ಷರಸ್ಥ ಮೌಢ್ಯ. ಎರಡೂ ಒಂದೇ ಅಲ್ಲವೆ?' ಎಂದು ಪ್ರತಿಕ್ರಿಯಿಸಿದರು. ಒಂದು ನಿಮಿಷ ಮೌನವಾಗಿ ಯೋಚಿಸಿದ ಕುವೆಂಪು, 'ನೀವು ಹೇಳುವುದು ಸರಿ' ಎಂದರು.

ಪ್ರಭುಶಂಕರ ಅವರ ಕಪ್ಪಗಿದ್ದರು. ಅದನ್ನು ಅವರು ಹಲವು ವಿಧಗಳಲ್ಲಿ ಹಾಸ್ಯ ಮಾಡಿಕೊಂಡಿದ್ದಾರೆ. ಕಡಿದಾಳು ಶಾಮಣ್ಣ ಅವರು ಪ್ರಭುಶಂಕರ ಅವರನ್ನು ನೋಡಲು ಬಂದಾಗ ಅವರು ಸ್ನಾನಕ್ಕೆ ಹೋಗಿದ್ದರು.



ಕೆ.ವಿ. ಪುಟ್ಟಪ್ಪ ಅವರೊಂದಿಗೆ ಪ್ರಭುಶಂಕರ